ಸಭಾಂಗಣವೊಂದಕ್ಕೆ ಹೆಸರು ಇಡಿಸಿಕೊಳ್ಳುವ ಹುಕಿಯಂತೂ ಶಂ.ಬಾ. ಅವರಿಗೆ ಎಂದೂ ಇರಲಿಲ್ಲ. ಜೆಪಿ ಚಳವಳಿ ಕಾಲಕ್ಕೆ ಜೆಪಿಗೆ ಕಾಣಿಕೆ ಕೊಡಲೆಂದು ಸಂಗ್ರಹಿಸಿದ್ದ ಹಣವನ್ನು ಕದ್ದು, ಬಳಸಿ, ಮದ್ಯ ಕುಡಿದವರನ್ನು ವಿರೋಧಿಸಿ, ಆ ಸಂಘಟನೆಯಿಂದಲೇ ಹೊರಗೆ ಬಂದಿದ್ದವನು ನಾನು. ಈಗಲೂ ಆಗಿನ ಕೆಲವು ಅದೇ ಜನರು ಇಲ್ಲಿ ಸೇರಿದ್ದರು. ಮತ್ತು ಅಂಥ ಕೆಲಸದಲ್ಲಿ ಇನ್ನಷ್ಟು ಹೆಚ್ಚು ನುರಿತ ಸಂಘದವರು ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳತೊಡಗಿದ್ದರು. ನಾನು ಬಹಿರಂಗವಾಗಿ ಹೋರಾಡುವ, ಗದ್ದಲ ಹಾಕುವ, ಪ್ರಚಾರ ಬಯಸುವ ಸ್ವಭಾವದವನಲ್ಲ, ಹೀಗಾಗಿ ಈಗಿನ ವಿದ್ಯಮಾನಗಳಿಂದ ದೂರ ಉಳಿದೆ.

◆ **ನಿಮಗೆ ಅನುವಾದ ಎನ್ನುವುದು ನಿಮ್ಮ ಅಭಿವ್ಯಕ್ತಿಯದೇ ಮುನ್ನಡೆಯಾಗಿತ್ತು. ಅಷ್ಟು ಪ್ರೀತಿ ನಿಮಗೆ ಅನುವಾದ ಕಾರ್ಯದ ಮೇಲೆ. ಬೇರೆ ಬೇರೆ ಭಾಷೆಯ ಓದು ನಿಮ್ಮ ತಲೆಮಾರಿನ ಅನೇಕರಿಗಿತ್ತು. ಆದರೆ ಅನುವಾದ ಸೃಷ್ಟಿಗೆ ನೀವು ಕೊಟ್ಟ ಆದ್ಯತೆಯನ್ನು ಅವರು ಕೊಡಲಿಲ್ಲ. ಈಗಿದನ್ನು ಹೇಗೆ ವಿಶ್ಲೇಷಿಸಿಕೋತೀರಿ?**

ನನ್ನ ದೃಷ್ಟಿಯಲ್ಲಿ ಅನುವಾದವೂ ಮಹತ್ವದ ಸೃಷ್ಟಿಕ್ರಿಯೆಯೇ. ಒಂದು ಭಾಷೆಗೆ ಅಪಚಾರವಾಗದಂತೆ ಮೂಲ ಮತ್ತು ಉದ್ದಿಷ್ಟ ಭಾಷೆಯಲ್ಲಿ ಮೂಡುವ ಅನುಕೃತಿಗಳನ್ನು ಅವಳಿ ಮಕ್ಕಳಂತೆ ಕಾಣುವ ಹಾಗೆ ಸೃಜಿಸಬೇಕಾಗಿರುತ್ತದೆ. ಆಸಕ್ತಿ, ಪ್ರತಿಭೆ, ಪ್ರಯತ್ನಗಳು ಕೂಡಿ ಅಭಿನಯಿಸಿದಾಗ ಅದು ನವೀನ ಮರುಸೃಷ್ಟಿಯಾಗುತ್ತದೆ. ನಾನು ಅಂಥದನ್ನು ಸಾಧಿಸುವ ಮಾರ್ಗದಲ್ಲಿ ಸಾಗಿರುವ ಒಬ್ಬ ಪಥಿಕ, ಅಷ್ಟೆ. ಆ ನಿಟ್ಟಿನಲ್ಲಿ ಕೆಲವು ಕೃತಿಗಳನ್ನು ಅನುವಾದಿಸಿದ್ದೇನೆ. ಮಿತ್ರ, ರಂಗ ನಿರ್ದೇಶಕ ಬಿ.ವಿ. ಕಾರಂತರ ಒತ್ತಾಸೆಯಿಂದ ಮೋಹನ್ ರಾಕೇಶ್‌ರ 'ಆಷಾಢ್ ಕಾ ಏಕ್ ದಿನ್' ಎಂಬ ಹಿಂದೀ ನಾಟಕವನ್ನು ಮೊದಲು ಅನುವಾದಿಸಿದೆ. ಅದೇನಾಯಿತೋ, ಮುಂದೆ ಕೆಲವು ಮಿತ್ರರ ಆಗ್ರಹದ ಮೇರೆಗೆ ನಾಟಕಗಳನ್ನೇ ಅನುವಾದಿಸುತ್ತ ಬಂದೆ. ನಾನಾಗಿ ಒಂದು ಕೃತಿಯನ್ನು ಆರಿಸಿಕೊಂಡು ಅನುವಾದಿಸಿದ್ದು ಕಡಿಮೆ. ನನಗೆ ಇಷ್ಟವಾದ ಕೆಲವು ಉತ್ಕೃಷ್ಟ ಹಿಂದೀ ಕಥೆ, ಕಾದಂಬರಿಗಳಿವೆ. ಈಗಲೂ ಅವನ್ನು ಮೀರುವಂಥ ಕೃತಿಗಳು ನಮ್ಮಲ್ಲಿಲ್ಲ. ಆದರೂ ಅಂಥವನ್ನು ಅನುವಾದಿಸುವ ಪ್ರಯತ್ನ ಮಾಡದಾಗಿದ್ದೇನೆ.

ಅನುವಾದ ಎರಡನೆಯ ದರ್ಜೆಯ ಕೆಲಸವಂತೂ ಖಂಡಿತ ಅಲ್ಲ. ಅದು ಸ್ವತಃ ನಮ್ಮನ್ನು ತೀಡುವ, ಉನ್ನತೀಕರಿಸುವ ಸೃಜನಶೀಲ ಕ್ರಿಯೆ. ನಾನು ಆರಂಭದ ದಿನಗಳಲ್ಲಿ ಪಿ.ಸಿ. ತಟಪಟಿ, ಎಂ.ಎ. ಕಸ್ತೂರಿ ಅವರ ಪ್ರೋತ್ಸಾಹದಿಂದ ಜರ್ಮನ್, ಇಂಗ್ಲಿಷ್‌ದಿಂದ ಕನ್ನಡಕ್ಕೆ, ಹಿಂದಿಗೆ ಅನುವಾದ ಮಾಡಿದ್ದು ನೆನಪಿದೆ. ನಂತರ ಅದನ್ನು ಮುಂದುವರಿಸಲಾಗಲಿಲ್ಲ. ಸಂಸ್ಕೃತ, ಅರ್ಧಮಾಗಧೀ, ಹಿಂದೀ, ಉರ್ದೂ, ಸ್ವಲ್ಪ ಮಟ್ಟಿಗೆ ಮರಾಠಿಯ ಕ್ಲಾಸಿಕ್‌ಗಳನ್ನು ಕನ್ನಡಿಸಲು ಈಗಲೂ ಮನಸ್ಸಿದೆ. ಆದರೆ ವಯಸ್ಸು, ಆರೋಗ್ಯ, ದೃಷ್ಟಿ ನೆರವಿಗೆ ಬರದಾಗಿವೆ.

◆ **ನಿಮ್ಮ ವ್ಯಕ್ತಿತ್ವದ ಒಂದು ಮೀಸಲು ಪಾಲು ರಂಗಭೂಮಿಗಿದೆ. ನಾಟಕಗಳ ಬರವಣಿಗೆ, ಅನುವಾದಗಳಿಗಷ್ಟೇ ಅದು ಸೀಮಿತವಾಗಿಲ್ಲ. ಅಂಥದ್ದೊಂದು ರಂಗನಂಟು–ರಂಗಪ್ರೀತಿ ಹೇಗೆ ಬೆಳೆಯಿತು?**

ನನ್ನ ಒಬ್ಬ ಅಜ್ಜ ಹಾಗೂ ಮೂವರು ಸೋದರಮಾವಂದಿರು ನಾಟಕ ಕಲಾವಿದರಾಗಿದ್ದರು. ಬಾಲ್ಯದಲ್ಲಿ ಯಾದವಾಡದಲ್ಲಿ ಸಣ್ಣಾಟಗಳನ್ನು, ಮನಗುಂಡಿಯಲ್ಲಿ ದೊಡ್ಡಾಟಗಳನ್ನು ನೋಡಿದ್ದೇನೆ. ಮೂವರೂ ಮಾವಂದಿರಿಗೆ ತಬಲಾ, ಹಾರ್ಮೋನಿಯಂ ಬಾರಿಸುವುದು, ದಿನಾ ಗುಡಿಗಳಲ್ಲಿ ಭಜನೆ